ದೂರವಾಣಿ ಸಂಖ್ಯೆ: 080-22212343
ಫ್ಯಾಕ್ಸ್ ಸಂಖ್ಯೆ: 080-22278803

ಅಂತರ್ಜಾಲ: https://kptcl.karnataka.gov.in.
ಇ-ಮೇಲ್ ವಿಳಾಸ: director.ahr.kptcl@gmail.com

# ಕರ್ನಾಟಕ ವಿದ್ಯುತ್ ಪ್ರಸರಣ ನಿಗಮ ನಿಯಮಿತ

ನಿಗಮದ ಗುರುತಿನ ಸಂಖ್ಯೆ (ಸಿ.ಐ.ಎನ್): ಯು40109ಕೆಎ1999ಎಸ್‌ಜಿಸಿ025521
ಕಂಪನಿ ಅಧಿಕೃತ ಕಛೇರಿ: ನಿಗಮ ಕಾರ್ಯಾಲಯ, ಕಾವೇರಿ ಭವನ, ಕೆ.ಜಿ.ರಸ್ತೆ, ಬೆಂಗಳೂರು 560 009

ಸಂಖ್ಯೆ: ಕವಿಪ್ರನಿನಿ/ಬಿ99/ಬಿ5ಬಿ/11333/2009-10 ದಿನಾಂಕ: 5 JAN 2021

## ಸುತ್ತೋಲೆ

ವಿಷಯ: 2020-21 ನೇ ಸಾಲಿನ ಸ್ಥಿರಾಸ್ತಿ ಮತ್ತು ಚರಾಸ್ತಿ ಹಾಗೂ ಹೊಣೆಗಳ ವಿವರಗಳನ್ನು ಘೋಷಿಸುವ ಬಗ್ಗೆ.

ಉಲ್ಲೇಖ:
1. ನಿಗಮದ ಆದೇಶ ಸಂಖ್ಯೆ: ಕೆಇಬಿ/ಬಿ4/7626/85-86 ದಿನಾಂಕ: 07-08-1987.
2. ನಿಗಮದ ಸುತ್ತೋಲೆ ಸಂಖ್ಯೆ: ಕವಿಪ್ರನಿನಿ/ಬಿ34/ಎಸ್‌ಎ4/7626/85-86 ದಿನಾಂಕ: 03.02.2009.
3. ನಿಗಮದ ಆದೇಶ ಸಂಖ್ಯೆ: ಕವಿಪ್ರನಿನಿ/ಬಿ85/ಬಿ5ಎ/427/2007-08 ದಿನಾಂಕ: 04.01.2020.
4. ನಿಗಮದ ಸುತ್ತೋಲೆ ಸಂಖ್ಯೆ: ಕವಿಪ್ರನಿನಿ/ಬಿ5ಬಿ/11333/2009-10 ದಿನಾಂಕ: 09.06.2020.
5. ನಿಗಮದ ಸುತ್ತೋಲೆ ಸಂಖ್ಯೆ: ಕವಿಪ್ರನಿನಿ/ಬಿ99/ಬಿ5ಬಿ/11333/2009-10 ದಿನಾಂಕ: 19.12.2020.

---

ಕವಿಮಂ ನೌಕರರ ಸೇವಾ(ನಡತೆ) ನಿಬಂಧನೆಗಳು 1988 ರ ನಿಬಂಧನೆ 23 ರ ಅನ್ವಯ, ಅಧಿಕಾರಿಗಳು ಮತ್ತು ನೌಕರರು ನಿಗಮದ ಸೇವೆಗೆ ನೇಮಕಗೊಂಡ ಆರಂಭದಲ್ಲಿರುವಂತೆ, ನಿಗಮವು ನಿಗಧಿಪಡಿಸುವ ನಮೂನೆಯಲ್ಲಿ ಪೂರ್ಣ ವಿವರಗಳ ಸಹಿತ ತಮ್ಮ ಆಸ್ತಿ ಮತ್ತು ಹೊಣೆಗಳ ವಿವರಗಳ ಪಟ್ಟಿಯನ್ನು ಸಲ್ಲಿಸಬೇಕಿರುತ್ತದೆ. ಮುಂದುವರೆದಂತೆ, ಅಧಿಕಾರಿಗಳು ಮತ್ತು ನೌಕರರು ತಮ್ಮ ಆಸ್ತಿ ಮತ್ತು ಹೊಣೆಗಳ ವಿವರಗಳ ಪಟ್ಟಿಯನ್ನು ಪ್ರತೀ ವರ್ಷವೂ ಕ್ಯಾಲೆಂಡರ್ ವರ್ಷಾಂತ್ಯಕ್ಕೆ ಸಲ್ಲಿಸುತ್ತಿರುವುದರ ಬದಲಾಗಿ ಆರ್ಥಿಕ ವರ್ಷದ ಅಂತ್ಯಕ್ಕೆ ಅಂದರೆ ದಿನಾಂಕ: 31.03.2021 ರ ಅಂತ್ಯಕ್ಕೆ ಇರುವಂತೆ ನಿಗದಿತ ನಮೂನೆಯಲ್ಲಿ ಸಲ್ಲಿಸುವುದು. ನಿಗದಿತ ದಿನಾಂಕದೊಳಗೆ ಸಲ್ಲಿಸದಿದ್ದಲ್ಲಿ, ಕರ್ತವ್ಯ ಲೋಪವೆಂದು ಪರಿಗಣಿಸುವುದು ಅನಿವಾರ್ಯವಾಗಿರುತ್ತದೆ. ಆದ್ದರಿಂದ, ರಾಜ್ಯಾವಾರು ಪದವೃಂದದ ಅಧಿಕಾರಿಗಳು ಕವಿಪ್ರನಿನಿ ನಿಗಮ ಕಾರ್ಯಾಲಯಕ್ಕೆ ಹಾಗೂ ಇತರೆ ಸಿಬ್ಬಂದಿಯು ಸಂಬಂಧಿಸಿದ ನೇಮಕಾತಿ ಪ್ರಾಧಿಕಾರಗಳಿಗೆ ತಮ್ಮ ಚರ/ಸ್ಥಿರ ಆಸ್ತಿ ಹಾಗೂ ಹೊಣೆಗಳ ವಿವರವನ್ನು ತಪ್ಪದೇ ಸಲ್ಲಿಸತಕ್ಕದ್ದು. ಈ ವಿಷಯದಲ್ಲಿ ಕೆಳಕಂಡ ನಿರ್ದೇಶನವನ್ನು ನೀಡಲಾಗಿದೆ:

1. ಪ್ರತೀ ವರ್ಷದಂತೆ ಎಲ್ಲಾ ಅಧಿಕಾರಿಗಳು ಮತ್ತು ನೌಕರರು ಈ ಆರ್ಥಿಕ ವರ್ಷಾಂತ್ಯಕ್ಕೆ, ದಿನಾಂಕ: 31.03.2021 ರಂದು ಇರುವಂತೆ ತಮ್ಮ ಚರ/ಸ್ಥಿರ ಆಸ್ತಿ ಹಾಗೂ ಹೊಣೆಗಳ ವಿವರವನ್ನು ಮೇಲೆ ತಿಳಿಸಿದಂತೆ ಸಂಬಂಧಿಸಿದ ಕಛೇರಿಗಳಿಗೆ ಆಸ್ತಿ ಮತ್ತು ಹೊಣೆಗಳ ಪಟ್ಟಿಯನ್ನು ಲಗತ್ತಿಸಿದ ನಮೂನೆಗಳಲ್ಲಿ ಭರ್ತಿಮಾಡಿ ಸಲ್ಲಿಸತಕ್ಕದ್ದು.

...2

2. ರಾಜ್ಯಾವಾರು ಪದವೃಂದದ ಅಧಿಕಾರಿಗಳು ವಿವರಗಳನ್ನು ಹಾಗೂ ತಮ್ಮ ಪಿ.ಐ.ಎನ್. ಸಂಖ್ಯೆಯನ್ನು ತಪ್ಪದೇ ನಮೂದಿಸಿ ನಿರ್ದೇಶಕರು(ಆಡಳಿತ ಮತ್ತು ಮಾನವ ಸಂಪನ್ಮೂಲ), ಕವಿಪ್ರನಿನಿ ರವರಿಗೆ ನೇರವಾಗಿ ಕಳುಹಿಸತಕ್ಕದ್ದು.

3. ಅಧಿಕಾರಿಗಳು ಮತ್ತು ನೌಕರರು 2020-21 ನೇ ಸಾಲಿನಲ್ಲಿ ಮಾತ್ರ ತಮ್ಮ ಆಸ್ತಿ ಮತ್ತು ಹೊಣೆಗಾರಿಕೆ ಪಟ್ಟಿಯ ಮೇಲೆ ದಿನಾಂಕ: 01.01.2020 ರಿಂದ ದಿನಾಂಕ: 31.03.2021 ಎಂದು ನಮೂದಿಸತಕ್ಕದ್ದು.

4. ಅಧಿಕಾರಿಗಳು ಮತ್ತು ನೌಕರರು ತಮ್ಮ 2020-21 ರ ಆರ್ಥಿಕ ವರ್ಷದ ಚರ/ಸ್ಥಿರ ಆಸ್ತಿ ಹಾಗೂ ಹೊಣೆಗಳ ವಿವರವನ್ನು ಸಂಬಂಧಿಸಿದ ಕಛೇರಿಗಳಿಗೆ ಸಲ್ಲಿಸಲು **ಕೊನೆಯ ದಿನಾಂಕ: 31.05.2021.** ವಿವರವನ್ನು ಸಲ್ಲಿಸದ ಅಧಿಕಾರಿಗಳ ಮತ್ತು ನೌಕರರ ವಿರುದ್ಧ ದಿನಾಂಕ: 01.06.2021 ರ ನಂತರ ಸಂಬಂಧಿಸಿದ ನೇಮಕಾತಿ ಪ್ರಾಧಿಕಾರವು ಶಿಸ್ತು ಕ್ರಮವನ್ನು ಜರುಗಿಸತಕ್ಕದ್ದು.

5. 'ಎ' ಮತ್ತು 'ಬಿ' ಗುಂಪಿನ ಎಲ್ಲಾ ಅಧಿಕಾರಿಗಳು ತಮ್ಮ ಚರ/ಸ್ಥಿರ ಆಸ್ತಿ ಹಾಗೂ ಹೊಣೆಗಳ ವಿವರವನ್ನು ಸಲ್ಲಿಸಿದ ಬಗ್ಗೆ **ಜೂನ್ 2021 ರ ಮಾಹೆಯ ವೇತನದ ಹುಂಡಿಯಲ್ಲಿ** ದೃಢೀಕರಿಸತಕ್ಕದ್ದು.

6. ಸಂಬಂಧಿಸಿದ ನೇಮಕಾತಿ ಪ್ರಾಧಿಕಾರವು ಈ ವಿವರವನ್ನು ನಿಗದಿತ ನಮೂನೆಯಲ್ಲಿ 'ಸಿ' ಮತ್ತು 'ಡಿ' ಗುಂಪಿನ ನೌಕರರಿಂದ ಪಡೆದು ಅವರ ಕಛೇರಿಯಲ್ಲಿ ವೈಯಕ್ತಿಕ ಕಡತಗಳನ್ನು ನಿರ್ವಹಿಸತಕ್ಕದ್ದು.

7. ಅಧಿಕಾರಿಗಳು ಮತ್ತು ನೌಕರರು ಸಲ್ಲಿಸಿರುವ ಪ್ರಸ್ತುತ ಆರ್ಥಿಕ ವರ್ಷದ ಚರ/ಸ್ಥಿರ ಆಸ್ತಿ ಮತ್ತು ಹೊಣೆಗಳ ಪಟ್ಟಿಯನ್ನು ಹಿಂದಿನ ವರ್ಷದ ಆಸ್ತಿ ಮತ್ತು ಹೊಣೆಗಳ ಪಟ್ಟಿಯೊಂದಿಗೆ ಹೋಲಿಕೆ ಮಾಡಿ, ಹೆಚ್ಚಿನ ವ್ಯತ್ಯಾಸ/ಅಂತರ ಕಂಡುಬಂದಲ್ಲಿ, ಸಂಬಂಧಪಟ್ಟ ನೇಮಕಾತಿ ಪ್ರಾಧಿಕಾರಗಳು ಸಂಬಂಧಿಸಿದ ಅಧಿಕಾರಿಗಳು ಮತ್ತು ನೌಕರರುಗಳಿಗೆ ಪತ್ರದ ಮೂಲಕ ಸ್ಪಷ್ಟೀಕರಣವನ್ನು ಪಡೆದು ಕಡತದಲ್ಲಿ ಸೇರಿಸುವಂತೆ ಸೂಚಿಸಿದೆ.

8. ಕವಿಮಂ ನೌಕರರ ಸೇವಾ(ನಡತೆ) ನಿಬಂಧನೆಗಳು 1988 ರ ನಿಬಂಧನೆ 23 ರಲ್ಲಿ ತಿಳಿಸಿರುವಂತೆ ಅಧಿಕಾರಿಗಳು ಮತ್ತು ನೌಕರರು ತಮ್ಮ ಅಥವಾ ತಮ್ಮ ಕುಟುಂಬ ಸದಸ್ಯರ ಹೆಸರಿನಲ್ಲಿ ಸ್ಥಿರಾಸ್ತಿ ಖರೀದಿ/ಮಾರಾಟ ಮಾಡುವ ಮುನ್ನ ಸಂಬಂಧಪಟ್ಟ ನೇಮಕಾತಿ ಪ್ರಾಧಿಕಾರಗಳಿಂದ ಪೂರ್ವಾನುಮತಿಯನ್ನು ನಿಗಮದ ಸುತ್ತೋಲೆ ಸಂಖ್ಯೆ: ಕವಿಪ್ರನಿನಿ/ಬಿ99/3677/2019-20 ದಿನಾಂಕ:07.06.2019 ರ ಅನ್ವಯ ಕಡ್ಡಾಯವಾಗಿ ಪಡೆದಿರತಕ್ಕದ್ದು.

9. ಅಧಿಕಾರಿಗಳು ಮತ್ತು ನೌಕರರು ತಮ್ಮ ಚರ/ಸ್ಥಿರ ಆಸ್ತಿ ಹಾಗೂ ಹೊಣೆಗಳ ವಿವರವನ್ನು ಸಲ್ಲಿಸದೇ ಇದ್ದಲ್ಲಿ, ಸದರಿ ಅಧಿಕಾರಿಗಳು ಮತ್ತು ನೌಕರರಿಗೆ ನಿರಾಕ್ಷೇಪಣಾ ಪತ್ರಗಳನ್ನು ಅಥವಾ ಯಾವುದೇ ವಿಶೇಷ ಅನುಮತಿಯನ್ನು ನೀಡತಕ್ಕದ್ದಲ್ಲ.

ಈ ವಿಷಯಕ್ಕೆ ಸಂಬಂಧಿಸಿದಂತೆ, ಮೇಲಾಧಿಕಾರಿಗಳು ಅವರ ಅಧೀನದಲ್ಲಿ ಕಾರ್ಯನಿರ್ವಹಿಸುತ್ತಿರುವ ಎಲ್ಲಾ ಸಿಬ್ಬಂದಿಯ ಗಮನಕ್ಕೆ ಮೇಲಿನ ಸೂಚನೆಗಳನ್ನು ತಪ್ಪದೇ ತರಲು ಕೋರಿದೆ. ಚರ/ಸ್ಥಿರ ಆಸ್ತಿ ಹಾಗೂ ಹೊಣೆಗಳ ವಿವರಗಳನ್ನು ಸಲ್ಲಿಸಬೇಕಿರುವ ನಮೂನೆಗಳನ್ನು ಕವಿಪ್ರನಿನಿಯ ಜಾಲತಾಣ: https://kptcl.karnataka.gov.in.=>eprasarana ದಲ್ಲಿ ಪಡೆಯಬಹುದಾಗಿದೆ.

...3

ವಿಶೇಷ ಸೂಚನೆ: ನಿಗಮದ ಸುತ್ತೋಲೆ ಸಂಖ್ಯೆ: ಕವಿಪ್ರನಿನಿ/ಬಿ99/ಬಿ5ಬಿ/11333/2009-10 ದಿನಾಂಕ: 19.12.2020 ರ ಸುತ್ತೋಲೆಯನ್ನು ಹಿಂಪಡೆಯಲಾಗಿದೆ.

"ನಿಗಮದ ನಿರ್ದೇಶಕರುಗಳ ಸಭೆಯ ಅನುಸಮರ್ಥನೆಗೆ ಒಳಪಟ್ಟಿರುತ್ತದೆ"

ನಿರ್ದೇಶಕರು(ಆಡಳಿತ ಮತ್ತು ಮಾ.ಸಂ.)
ಕವಿಪ್ರನಿನಿ

**ಮೆಮೊ**

ಕ್ರಮಾಂಕ: ಪ್ರವ್ಯ(ಆ ಮತ್ತು ಮಾ.ಸಂ)/ಉಪ್ರವ್ಯ/ಸಪ್ರವ್ಯ/ವ್ಯ/ಹಿಸ2/2020-21/CYS-1409 ದಿನಾಂಕ: 11 JAN 2021

2020ರ ಕ್ಯಾಲೆಂಡರ್ ವರ್ಷದ ಚರ/ಸ್ಥಿರ ಆಸ್ತಿ ಹಾಗೂ ಹೊಣೆಗಳ ಬಗ್ಗೆ ಕವಿಪ್ರನಿನಿಯಿಂದ ಹೊರಡಿಸಲಾಗಿರುವ ಪರಿಷ್ಕೃತ ಸುತ್ತೋಲೆ ಸಂಖ್ಯೆ: ಕವಿಪ್ರನಿನಿ/ಬಿ99/ಬಿ5ಬಿ/11333/2009-10 ದಿನಾಂಕ: 05.01.2021ನ್ನು ಚಾವಿಸನಿನಿಯಲ್ಲಿ ಯಥಾವತ್ತಾಗಿ ಅಳವಡಿಸಿಕೊಳ್ಳಲಾಗಿದೆ.

ಪ್ರಧಾನ ವ್ಯವಸ್ಥಾಪಕರು,(ಆ ಮತ್ತು ಮಾ.ಸಂ)
ಚಾ.ವಿ.ಸ.ನಿ.ನಿ., ಮೈಸೂರು.

**ಪ್ರತಿಗಳು:**

- ಮುಖ್ಯ ಪ್ರಧಾನ ವ್ಯವಸ್ಥಾಪಕರು(ಆಂ.ಪ), ನಿಗಮ ಕಛೇರಿ, ಚಾವಿಸನಿನಿ, ಮೈಸೂರು.
- ಮುಖ್ಯ ಇಂಜಿನಿಯರ್(ವಿ), ಕಾರ್ಯ ಮತ್ತು ಪಾಲನಾ ವಲಯ, ಚಾವಿಸನಿನಿ, ಮೈಸೂರು/ಹಾಸನ
- ಎಲ್ಲಾ ಪ್ರಧಾನ ವ್ಯವಸ್ಥಾಪಕರು, ನಿಗಮ ಕಚೇರಿ, ಚಾವಿಸನಿನಿ, ಮೈಸೂರು.
- ಎಲ್ಲಾ ಅಧೀಕ್ಷಕ ಇಂಜಿನಿಯರ್(ವಿ), ಕಾರ್ಯ ಮತ್ತು ಪಾಲನಾ ವೃತ್ತ, ಚಾವಿಸನಿನಿ.
- ಎಲ್ಲಾ ಕಾರ್ಯನಿರ್ವಾಹಕ ಇಂಜಿನಿಯರ್(ವಿ), ಕಾರ್ಯ ಮತ್ತು ಪಾಲನಾ ವಿಭಾಗ, ಚಾವಿಸನಿನಿ
- ಉಪಪ್ರಧಾನ ವ್ಯವಸ್ಥಾಪಕರು (ಎಂ.ಐ.ಎಸ್), ನಿಗಮ ಕಾರ್ಯಾಲಯ, ಚಾವಿಸನಿನಿ, ಮೈಸೂರು ರವರಿಗೆ ನಿಗಮದ ವೆಬ್‌ಸೈಟ್‌ನಲ್ಲಿ ಪ್ರಕಟಿಸಲು
- ಆ.ಕಾ-ವ್ಯ.ನಿ/ನಿ(ತಾಂ)/ಮು.ಆ.ಅ
- ಸ2(ಆ ಮತ್ತು ಮಾಸಂ)/ಪ್ರ.ಕ.